# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

## ಮಲ್ಲೇಶ್ವರಂ, ಬೆಂಗಳೂರು – 3

# 2019–20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ 1

ವಿಷಯ :ಪ್ರಥಮ ಭಾಷೆ ಕನ್ನಡ [ಶಾಲಾ ಅಭ್ಯರ್ಥಿಗಳಿಗೆ] ವಿಷಯ ಸಂಕೇತ :01K

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 100

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6

1. ವ್ಯಾಪಾರಿಯಾದ ಅನಂತಮೂರ್ತಿಯವರು ತಮ್ಮ ಊರು ಸಿದ್ದನಪುರಕ್ಕೆ ನಡೆದೇ ಹೋದರು. ಈ ವಾಕ್ಯದಲ್ಲಿರುವ ಸರ್ವನಾಮ ಪದ :

ಎ) ವ್ಯಾಪಾರಿ ಬಿ) ಅನಂತಮೂರ್ತಿ

ಸಿ) ತಮ್ಮ ಡಿ) ಸಿದ್ದನಪುರ

2. ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

ಎ) ಅರ್ಧ ವಿರಾಮ ಬಿ) ಪ್ರಶ್ನಾರ್ಥಕ

ಸಿ) ಅಲ್ಪವಿರಾಮ ಡಿ) ಉದ್ಧರಣ

3. 'ಮೂಗಾವುದ' ಪದವು ಈ ಸಮಾಸದ್ದಾಗಿದೆ :

ಎ) ದ್ವಿಗು ಬಿ) ಗಮಕ

ಸಿ) ಕ್ರಿಯಾ ಡಿ) ಅಂಶಿ

4. ಶ್ಚುತ್ವಸಂಧಿಯ ಉದಾಹರಣೆಯಿದು :

ಎ) ಅಷ್ಟೈಶ್ವರ್ಯ ಬಿ) ಉನ್ಮಾದ

ಸಿ) ಬೃಹಚ್ಛತ್ರ ಡಿ) ಅತ್ಯವಸರ

5. ಹಳೆಗನ್ನಡದಲ್ಲಿ ಕರಣ ಕಾರಕದ ವಿಭಕ್ತಿ ಪ್ರತ್ಯಯ :

ಎ) ಇಂದಂ ಬಿ) ಅತ್ತಣಿಂದಂ

ಸಿ) ಅಂ ಡಿ) ಕೆ

6. ಅರಬ್ಬೀ ಭಾಷೆಯಿಂದ ಕನ್ನಡಕ್ಕೆ ಬಂದ ಪದವಿದು :

ಎ) ದಲ್ಲಾಳಿ ಬಿ) ಕಿಮ್ಮತ್ತು

ಸಿ) ಸಲಾಮು ಡಿ) ತಕರಾರು

II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. **4*1=4**

7. ಹಾಲ್ಜೇನು : ಜೋಡುನುಡಿ : : ಬೇಗಬೇಗನೆ :

8. ಪೆರ್ಮೆ : ತದ್ಧಿತಾಂತ ಭಾವನಾಮ : : ಮಾಡಲಿಕ್ಕೆ :

9. ಗಡಣ : ಸಮೂಹ : : ಗ್ಲಾನಿ :

10. ಅರ್ಕ : ಎಕ್ಕ : : ವಂಧ್ಯಾ :

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **7*1=7**

11. ಸುಕುಮಾರಸ್ವಾಮಿಯ ತಂದೆಯ ಹೆಸರೇನು?

12. ದೇವನೂರು ಮಹಾದೇವ ಅವರು ಓದಿದ ಹಳಕಟ್ಟಿಯವರ ಪುಸ್ತಕದ ಹೆಸರೇನು?

13. ಮುಂಬೈ ಪ್ರಾಂತ್ಯದ ಸ್ಯಾನಿಟರಿ ಇಂಜಿನಿಯರ್ ಆಗಿ ನೇಮಕಗೊಂಡ ಪ್ರಥಮ ಭಾರತೀಯ ಯಾರು?

14. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

15. ಶಿವರುದ್ರಪ್ಪ ಅವರು ನದೀಜಲಗಳು ಏನಾಗಿವೆ ಎಂದಿದ್ದಾರೆ?

16. ಪರಶುರಾಮನು ದ್ರೋಣನಿಗೆ ಯಾವ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟನು?

17. ಪುಟ್ಟಿ ಬಾಲರವಿಯನ್ನು ಕಂಡು ಹೇಗೆ ಮತ್ತೆ ಮತ್ತೆ ನೋಡುತ್ತಿದ್ದಾಳೆ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **10*2=20**

18. ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸು ಹೇಗೆ ಇದೆ ತಿಳಿಸಿ.

19. 'ಸ್ಟೋನ್ ಆಫ್ ಸ್ಕೋನ್' ಇದರ ವಿಶೇಷತೆಯನ್ನು ತಿಳಿಸಿ.

20. ಅರಸನು ಯಶೋಭದ್ರೆಯ ಮನೆಗೆ ಆಗಮಿಸಲು ಕಾರಣವಾದ ಆಶ್ಚರ್ಯಕರ ವಿಷಯ ಯಾವುದು?

21. ಗ್ರಾಮ ದೇವತೆ ಮನೆಮಂಚಮ್ಮ ಮತ್ತು ಜನರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

22. ಹಲಗಲಿಗೆ ದಂಡು ಬರಲು ಕಾರಣವೇನು?

23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

24. ವಿವೇಕಾನಂದರು ಇಂದಿಗೂ ಸತ್ಯ ಎನ್ನಲು ಕಾರಣವಾದ ಅವರ ವೈಯಕ್ತಿಕ ಮತ್ತು ವೈಚಾರಿಕ ಸತ್ಯ ಯಾವುದು?

25. ರಕ್ತ ಸಿಕ್ತ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದ ಭಗತ್‌ಸಿಂಗ್‌ಗೆ ಅದರಿಂದ ದೊರೆತ ಫಲವೇನು?

26. ಮೃಗವು ರಾಜಕುಮಾರನಾಗಿ ಬದಲಾದ ಸಂದರ್ಭದ ಘಟನೆಯನ್ನು ತಿಳಿಸಿ.

27. ಉಪ್ಪಿನ ವಿಶೇಷತೆಯು ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

**V.** ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **2*3=6**

28. ಎ.ಎನ್. ಮೂರ್ತಿರಾವ್

29. ಜಿ.ಎಸ್. ಶಿವರುದ್ರಪ್ಪ

**VI.** ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.**1*3=3**

30. ಗಗನವಬುಧಿಗೆ ಸರಿ ಸರೋವರ
ಜಗಕೆ ಹಿತವನು ಶಕ್ರ ಮನುಜಾ
ದಿಗಳ ಮಾತಾರೂಪು ಗೋವುಗಳಿದು ನಿಧಾನ ಮತ ॥

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.**1*3=3**

31. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. **1*3=3**

32. ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ

ಅಥವಾ

ಬೆಳ್ಳಗಿರುವುದೆಲ್ಲ ಹಾಲಲ್ಲ ; ಹೊಳೆಯುವುದೆಲ್ಲ ಚಿನ್ನವಲ್ಲ

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ **6*3=18**

33. "ನಾನಾಕೆಯನ್ನು ಪರೀಕ್ಷಿಸುವೆ ನೀವು ಬಿಸಿ ನೀರು ಸಿದ್ಧಪಡಿಸಿ"

34. "ಸಾಮಾಜಿಕ ಕಾನೂನುಗಳ ಹರಿಕಾರ"

35. "ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ"

36. "ಮಂಗಳಲೋಕದ ಅಂಗಳಕೇರಿ"

37. "ಬೇರೆ ಬಣ್ಣವನೆ ಕಾಣೆ"

38. "ಎನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ"

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ **1*4=4**

39. ನೆಲಕಿರಿವೆನೆಂದು ________
________________
________________
________________ ಪುದುವಾಳ್ದಪನೇ ॥

ಅಥವಾ

ಪುಟ್ಟಿದ ನೂರ್ವರು________

______________________________

____________________

______________________ ಛಲವನೆ ಮೆರೆವೆಂ ॥

**XI.** ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ 1*4=4

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

ನೊರ್ವನೇ ವೀರನಾತನ ಯಜ್ಞತುರಗಮಿದು

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥

ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ

ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥

**XII.** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ 2*4=8

41. ಶಬರಿಯು ರಾಮ ಲಕ್ಷ್ಮಣರಿಗೆ ಮಾಡಿದ ಉಪಚಾರ ಮತ್ತು ತನ್ನ ಅಂತಸ್ಸುಖವನ್ನು ತೋರಿಸಿದ ರೀತಿಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

ಅಥವಾ

ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಯನ್ನು ನೆನೆದು ದುಃಖಿಸಿದ ಪರಿ ಮತ್ತು ಪರಸ್ಪರ ಮಾಡಿಕೊಂಡ ಸಮಾಧಾನದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

42. ಶ್ರೀಕೃಷ್ಣನು ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸಿ ಒಡ್ಡಿದ ಆಮಿಷಗಳೇನು?

ಅಥವಾ

ಪಾಂಡವರು ಸಹೋದರರೆಂದು ತಿಳಿಸಿ ಆಮಿಷ ಒಡ್ಡಿದ ಶ್ರೀಕೃಷ್ಣನಿಗೆ ಕರ್ಣನ ಪ್ರತ್ಯುತ್ತರ ಏನೆಂಬುದನ್ನು ವಿವರಿಸಿ.

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4[2+2]

43. ಯಾವುದೇ ಒಂದು ಪ್ರದೇಶದ ಅಭಿವೃದ್ಧಿಗೆ ರೂಪಿಸುವ ಕಾರ್ಯಕ್ರಮ ಹೇಗಿರಬೇಕು ಎಂಬ ವಿಷಯವನ್ನು 'ಚಿಪ್ಕೋ ಚಳವಳಿ' ಜನರಿಗೆ, ಸರ್ಕಾರಕ್ಕೆ ಬಹು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತಿದೆ. ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು; ಪರಿಸರಕ್ಕೆ ಪೂರಕವಾಗಿರಬೇಕು. ವಿನಾಶವಿಲ್ಲದ ಅಭಿವೃದ್ಧಿಯೇ ನಮ್ಮ ಗುರಿಯಾಗಬೇಕು – ಇದು ಚಿಪ್ಕೋ ಚಳವಳಿಯ ಮೂಲಮಂತ್ರ. ಅರಣ್ಯಗಳು ಮರಮುಟ್ಟುಗಳನ್ನೂ, ರಾಳವನ್ನೂ ಒದಗಿಸುವ ಬೃಹತ್ ಆಗರ – ಇದು ಸರ್ಕಾರದ ವಾಣಿಜ್ಯ ದೃಷ್ಟಿ. ಅರಣ್ಯಗಳು ನೆಲದ ಸಾರವನ್ನು ರಕ್ಷಿಸುವ, ನೀರನ್ನು ಹಿಡಿದಿಡುವ, ಪರಿಸರವನ್ನು ಶುಚಿಯಾಗಿಡುವ ಬೃಹತ್ ನೈಸರ್ಗಿಕ ವ್ಯವಸ್ಥೆ ಕೂಡ. ಇದು ಜನಸಾಮಾನ್ಯರ ದೃಷ್ಟಿ. ಈ ಎರಡೂ ದೃಷ್ಟಿಗಳ ಅರ್ಥಪೂರ್ಣ ಸಮ್ಮಿಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ. ಸಮಸ್ತ ರೀತಿಯ ಆಧುನಿಕ ಉಪಕರಣಗಳಿಂದ ಸಜ್ಜಾದ ವೃತ್ತ ಪತ್ರಿಕೆಗಳು, ಸಿನಿಮಾ,

ರೇಡಿಯೋ, ದೂರದರ್ಶನ ಮುಂತಾದ ಮಾಧ್ಯಮಗಳು ಸಾಧಿಸಲಾರದ ಕೆಲಸವನ್ನು ಚಿಪ್ಕೋ ಸದಸ್ಯರು ಬೆಟ್ಟಗಾಡು ಪ್ರದೇಶಗಳಲ್ಲಿ ಕಾಲ್ನಡಿಗೆಯಲ್ಲಿ ನಡೆದು ಸಾಧಿಸಿದ್ದಾರೆ. ಚಿಪ್ಕೋ ತಂಡ ಹಳ್ಳಿಯ ಜನರಿಗೆ ಮೂಲಭೂತವಾಗಿ ಎರಡು ಕಾರ್ಯಕ್ರಮಗಳನ್ನು ರೂಪಿಸಿದೆ. ಮೊದಲನೆಯದು: ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು. ಎರಡನೆಯದು: ಆಹಾರ ಮೇವು ಸೌದೆ ಗೊಬ್ಬರ ಮತ್ತು ನಾರು ಈ ಐದು ಆವಶ್ಯಕತೆಗಳನ್ನು ಪೂರೈಸುವಂತಹ ಮರಗಳನ್ನು ನೆಡುವುದು. ಈ ಎರಡೂ ಕಾರ್ಯಗಳು ಇಂದು ಹಿಮಾಲಯ ಪರ್ವತ ಪ್ರದೇಶದ ನೂರಾರು ಹಳ್ಳಿಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ. ಚಿಪ್ಕೋ ಚಳವಳಿಯ ಅಸಾಧಾರಣ ಯಶಸ್ಸಿನ ಗುಟ್ಟೆಂದರೆ ಅದು ಜನರಿಂದ, ಜನರ ಒಳಿತಿಗಾಗಿ ಹುಟ್ಟಿ ಬೆಳೆದ ಆಂದೋಲನ. ವೈಯಕ್ತಿಕ ಮಟ್ಟದಲ್ಲಿ ಪರಿಸರ ಪ್ರಜ್ಞೆ ಬೆಳೆದಾಗ ಮಾತ್ರ ನಮ್ಮನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳಿಂದ ನಮಗೆ ಮುಕ್ತಿ ಸಾಧ್ಯ.

ಪ್ರಶ್ನೆಗಳು :

43. ಅ) ಯಾವ ಎರಡು ದೃಷ್ಟಿಕೋನಗಳ ಸಮ್ಮಿಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ?

43. ಬ) ಹಿಮಾಲಯ ಪರ್ವತ ಪ್ರದೇಶದ ಹಳ್ಳಿಗಳಲ್ಲಿ ಚಿಪ್ಕೋ ಚಳವಳಿ ಜನಪ್ರಿಯಗೊಳಿಸಿದ ಎರಡು ಕಾರ್ಯಕ್ರಮಗಳು ಯಾವುವು?

**XIV.** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ 1*5=5

44. ನಿಮ್ಮನ್ನು ಹುಬ್ಬಳ್ಳಿಯ ಸರ್ಕಾರಿ ಪ್ರೌಢಶಾಲೆಯ 'ತೇಜಸ್ವಿ' ಎಂದು ಭಾವಿಸಿಕೊಂಡು ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ವ್ಯವಸ್ಥಾಪಕರಿಗೆ ಪ್ರದರ್ಶನದ ವೇಳೆಯನ್ನು ತಿಳಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಕಾರ್ಕಳದ ಅಬ್ಬಕ್ಕದೇವಿ ವಸತಿಶಾಲೆಯ 'ಸಮನ್ವಿತ' ಎಂದು ಭಾವಿಸಿಕೊಂಡು ಬೆಳಗಾವಿಯ ಕೋಟೆ ಬೀದಿಯ ನಿವಾಸಿ ಶಾಂತಾಬಾಯಿ ಎಂಬ ಹೆಸರಿನ ತಾಯಿಗೆ ಕ್ಷೇಮ ಸಮಾಚಾರ ತಿಳಿಸಿ ಪತ್ರ ಬರೆಯಿರಿ.

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ 1*5=5

45. ಪ್ರೌಢಶಾಲಾ ಶಿಕ್ಷಣದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ದೊರಕುವ ಅವಕಾಶಗಳು

ಅಥವಾ

ನನ್ನ ಮೆಚ್ಚಿನ ಪುಸ್ತಕ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

## ಮಲ್ಲೇಶ್ವರಂ, ಬೆಂಗಳೂರು – 3

# 2019-20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ 2

ವಿಷಯ : ಪ್ರಥಮ ಭಾಷೆ ಕನ್ನಡ [ಶಾಲಾ ಅಭ್ಯರ್ಥಿಗಳಿಗೆ] ವಿಷಯ ಸಂಕೇತ : 01 K

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 100

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6*1=6**

1. 'ಅತ್ಯಾದರ' ಪದವು ಈ ಸಂಧಿಯದ್ದಾಗಿದೆ :

ಎ) ಯಣ್ ಸಂಧಿ ಬಿ) ಅನುನಾಸಿಕ ಸಂಧಿ

ಸಿ) ಜಶ್ತ್ವ ಸಂಧಿ ಡಿ) ಶ್ಚುತ್ವ ಸಂಧಿ

2. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆಯನ್ನು ಬಳಸುವರು

ಎ) ಅಲ್ಪವಿರಾಮ ಬಿ) ಆವರಣ

ಸಿ) ವಿವರಣ ಡಿ) ಅರ್ಧವಿರಾಮ

3.' ಕೈ ಕೊಳ್ವುದು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ಕರ್ಮಧಾರಯ ಬಿ) ಅಂಶಿ

ಸಿ) ಕ್ರಿಯಾ ಡಿ) ತತ್ಪುರುಷ

4. ಅಪಾದಾನ ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ :

ಎ) ಚತುರ್ಥಿ ಬಿ) ಪಂಚಮಿ

ಸಿ) ತೃತೀಯಾ ಡಿ) ಸಪ್ತಮಿ

5. ವ್ಯಾಪಾರಿಯು ನಷ್ಟ ಅನುಭವಿಸಿ ನಗರದಿಂದ ಹಳ್ಳಿಗೆ ವಲಸೆ ಹೋದನು. ಈ ವಾಕ್ಯದಲ್ಲಿರುವ ಅನ್ವರ್ಥನಾಮಪದ :

ಎ) ವ್ಯಾಪಾರಿ ಬಿ) ಹಳ್ಳಿ

ಸಿ) ಅನುಭವ ಡಿ) ನಗರ

6. ಹೌದು, ಅಲ್ಲ ಪದಗಳು ಈ ಅವ್ಯಯಕ್ಕೆ ಉದಾಹರಣೆ ಆಗಿವೆ :

ಎ) ಅವಧಾರಣಾರ್ಥಕಾವ್ಯಯ ಬಿ) ಕ್ರಿಯಾರ್ಥಕಾವ್ಯಯ

ಸಿ) ಸಾಮಾನ್ಯಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ

II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4

7. ದಲ್ಲಾಳಿ : ಪಾರ್ಸಿ : : ಕಾಗದ :

8. ವಿದ್ಯಾಧರ : ಬಿಜ್ಜೋದರ : : ಸಂಸ್ಕೃತ :

9. ಚಟ್ಟರಿಂ : ಶಿಷ್ಯರಿಂದ : : ಸಮಂತು :

10. ಹಿರಿಮೆ : ತದ್ಧಿತಾಂತ ಭಾವನಾಮ : : ನೆನಪು :

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ7*1=7

11. ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ ವಿಶ್ವೇಶ್ವರಯ್ಯನವರು ಮಾಡಿದ ಘೋಷಣೆ ಏನು?

12. ಚಾವಣಿಯಿಲ್ಲದ ಗುಡಿಯಲ್ಲಿ ಪೂಜಿತಳಾಗಿರುವ ದೇವತೆಯ ಹೆಸರೇನು?

13. ಶಾನುಭೋಗರು ಚಿಕ್ಕನಾಯಕನ ಹಳ್ಳಿಯಿಂದ ಊರಿಗೆ ವಾಪಸ್ಸು ಹೋಗುವಾಗ ಯಾವ ಕಣಿವೆಯನ್ನು ದಾಟಿ ಹೋಗಬೇಕಿತ್ತು?

14. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ನ್ಯಾಯ ಕೇಳಲು ಯಾರ ಬಳಿಗೆ ಬಂದರು?

15. ದ್ರುಪದನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು?

16. ದ್ರೋಣನಿಗೆ ಯಾವುದು ಧನವಾಗಿತ್ತು?

17. ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆದು ಉಳುವವನಕಂಡು ನಗುವುದು ಯಾವುದು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20

18. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ " ಮಾದರಿ ಮೈಸೂರು" ಎಂಬ ಕೀರ್ತಿ ಪ್ರಾಪ್ತವಾಗಲು ಕಾರಣವೇನು?

19. ವಚನಕಾರರ ಪ್ರಜ್ಞೆಯ ಬಗ್ಗೆ ದೇವನೂರು ಮಹಾದೇವರ ಅಭಿಪ್ರಾಯವನ್ನು ತಿಳಿಸಿ.

20. ವೃಕ್ಷವು ಸಾಕ್ಷಿ ಹೇಳಿದಾಗ ಸತ್ಯವನ್ನು ಹೊರತರಲು ಧರ್ಮಬುದ್ಧಿಯು ಮಾಡಿದ ಉಪಾಯವನ್ನು ತಿಳಿಸಿ.

21. ವಟವೃಕ್ಷದ ಬಳಿ ಹೊನ್ನನ್ನು ಹೂಳಿಡುವ ಸಂದರ್ಭದ ಘಟನೆಯನ್ನು ತಿಳಿಸಿ.

22. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?

23. ದ್ರವ್ಯಾರ್ಥಿಯಾಗಿ ಬಂದ ದ್ರೋಣನನ್ನು ಪರಷುರಾಮನು ಹೇಗೆ ಸತ್ಕರಿಸಿದನು?

24. ಮನುಷ್ಯತ್ತ್ವದ ಮಹಿಮೆಯನ್ನು ಕುರಿತು ವಿವೇಕಾನಂದರ ಅಭಿಪ್ರಾಯವನ್ನು ತಿಳಿಸಿ.

25. ಒಡೆಯನ ಮನೆಯ ಅಂಗಳದ ಪ್ರಕೃತಿ ಸೌಂದರ್ಯ ಪುಟ್ಟ ಪೋರಿಗೆ ಹೇಗೆ ಕಂಡುಬಂದಿತು?

26. ಭಗತ್ ಸಿಂಗನು ವೀರಯೋಧನಾಗಿ ಅಮರನಾದುದು ಹೇಗೆ ತಿಳಿಸಿ.

27. ವರ್ತಕನು ನಗರದಲ್ಲಿ ವಾಸಿಸುವುದು ಕಷ್ಟವೆಂದು ಹಳ್ಳಿಗೆ ಹೋಗಲು ಕಾರಣವೇನು?

**V.** ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **2*3=6**

28. ವಿ.ಕೃ. ಗೋಕಾಕ್

29. ಕುಮಾರವ್ಯಾಸ

**VI.** ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1*3=3**

30. ಪುಟ್ಟಿದ ನೂರ್ವರುಮೆನ್ನೊಡ

ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ ॥

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. **1*3=3**

31. ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. **1*3=3**

32. ಕೂಡಿಬಾಳಿದರೆ ಸ್ವರ್ಗ ಸುಖ

ಅಥವಾ

ಅಡಿಕೆಗೆ ಹೋದ ಮಾನ ಆನೆಕೊಟ್ಟರೂ ಸಿಗದು

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ **6*3=18**

33. " ಸೂರ್ಯನೇ ತೇಜಗೆಡೆ ತೇಜಕೆಡೆಯಾರು"

34. "ಹುಲಿ ಈಗ ಎಷ್ಟು ಹಸಿದಿರಬೇಕು"

35. "ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಳ್ಗುಮದಂ ನೋಡಿ"

36. "ಹೊಸ ಎಚ್ಚರದೊಳು ಬದುಕೋಣ "

37. "ಮತ್ತೆ ವರುಣನ ಲೋಕದಿಂ ಬಂದು ಮುಳಿದಪನು"

38. "ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ"

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ **1*4=4**

39. ನೀಲ ಮೇಘ ____________

________________________

________________________

__________________ ಮಾಡಿದೆ ಕಣ್ಣಾ

ಅಥವಾ

ಯುಗಯುಗಗಳ ______________

________________________

________________________

_____________________ ಹಸುಮಕ್ಕಳ ಹರಸಿ

**XI.** ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ **1*4=4**

40. ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ
ಹಲಗರ ಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗ ರಾಮು ಮಸಲತ್ತ
ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ
ಹೊಡಿರಿ ಜಗಳ ಕೂಡಿ ತೀರ್ತೆವು ಕುಮಕಿ ನಮ್ಮದ್ಯಾವತ್ತ

**XII.** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ **2*4=8**

41. ಮುದುಕಿಯು ರಾಹಿಲನನ್ನು ವೈರಿಸೈನಿಕರಿಂದ ರಕ್ಷಣೆ ಮಾಡಿದ ಸಂದರ್ಭವನ್ನು ವಿವರಿಸಿ.

ಅಥವಾ

ರಾಹಿಲನು ಮುದುಕಿಯ ಸೊಸೆಯನ್ನು ಪ್ರಾಣಾಪಾಯದಿಂದ ಹೇಗೆ ಪಾರುಮಾಡಿದನು ವಿವರಿಸಿ.

42. ಕವಿ ಕುವೆಂಪುರವರು ಹಸುರಿನ ವ್ಯಾಪಕತೆಯನ್ನು ಎಲ್ಲೆಲ್ಲಿ ಕಂಡಿದ್ದಾರೆ ವಿವರಿಸಿ.

ಅಥವಾ

ಹಸುರು ಪದ್ಯವು ಕವಿ ಕುವೆಂಪುರವರ ಪ್ರಕೃತಿ ತನ್ಮಯತೆಗೆ ಸಾಕ್ಷಿಯಾಗಿದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **1*4=4[2+2]**

43. ಪ್ರಾಗ್ಜ್ಯೋತಿಷನಾದ ಭಗದತ್ತನು ಸುಪ್ರತೀಕವೆಂಬ ಆನೆಯೊಂದಿಗೆ ಭೀಮನನ್ನು ಎದುರುಗೊಂಡನು. ಈ ಆನೆಯನ್ನು ಮಣಿಸಲು ಭೀಮನಿಂದಲೂ ಸಾಧ್ಯವಿಲ್ಲ. ಇದನ್ನು ಮಣಿಸುವುದು ಕೃಷ್ಣಾರ್ಜುನರಿಗೆ ಮಾತ್ರ ಗೊತ್ತು. ಇಂದ್ರನ ಸಖನಾದ ಭಗದತ್ತನು ಪುರುಷಶ್ರೇಷ್ಠನೆಂದೂ ಪ್ರಸಿದ್ಧನು. ಇಂದು ಆತನನ್ನು ಸೋಲಿಸಲೇ ಬೇಕೆಂದು ಪಣತೊಟ್ಟು ಕೃಷ್ಣಾರ್ಜುನರು ಮುಂದೆ ಹೋಗುವಷ್ಟರಲ್ಲಿ ತ್ರಿಗರ್ತರು ಅರ್ಜುನನನ್ನು ಎದುರುಗೊಂಡು ಕಾದಾಡಲು ಪ್ರಾರಂಭಿಸಿದರು. ಸುಶರ್ಮನು ಅವನ ಸಹೋದರರು ಅರ್ಜುನನ ಮೇಲೆರಗಿ ಬಂದರು. ಅರ್ಜುನನು ಇನ್ನಿಲ್ಲದಂತೆ ಹೋರಾಡಿ ಅವರನ್ನು ಸೋಲಿಸಿ ಅವರ ಸೈನ್ಯವನ್ನು ದಿಕ್ಕಾಪಾಲಾಗಿ ಚದುರಿಸಿದನು. ಕೃಷ್ಣನ ಆಜ್ಞೆಯಂತೆ ಅರ್ಜುನನು ತಂದೆಯನ್ನು ಸ್ಮರಿಸಿ, ವಜ್ರಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಸುಶರ್ಮನು ರಥದಲ್ಲಿಯೇ ಮೂರ್ಛಿತನಾದನು ಇದನ್ನು ಕಂಡ ಕೃಷ್ಣನು “ಅರ್ಜುನ, ಇಂದು ಬಹಳ ಚೆನ್ನಾಗಿ ಕಾದಾಡಿದೆ ತ್ರಿಗರ್ತರನ್ನು ಏಕಾಂಗಿಯಾಗಿ ಸೋಲಿಸಿದೆ. ಭಗದತ್ತ ಮತ್ತು ಅವನ ಆನೆಯನ್ನು ಮಣಿಸಿದೆ. ನಿನ್ನಂತಹ ಧನುರ್ಧಾರಿಯನ್ನು ನೋಡಿ ನನಗೆ ಹೆಮ್ಮೆ ಎನಿಸಿದೆ ಎಂದನು.” ಯುದ್ಧದ ಸಂದರ್ಭದಲ್ಲಿ ಭಗದತ್ತನು ಪ್ರಯೋಗಿಸಿದ ವೈಷ್ಣವಾಸ್ತ್ರವು ಭಗದತ್ತನಿಗೆ ದೊರಲಿದ ಸಂದರ್ಭವನ್ನು ಕೃಷ್ಣನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಹೀಗೆ ತಿಳಿಸುತ್ತಾನೆ. “ ಒಂದು ಸಲ ಯಾವುದೋ ಕೆಟ್ಟ ಗಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆನು. ಯಾವ ಆಯುಧದಿಂದಲೂ ತನ್ನ ಮಗನಿಗೆ ಸಾವು ಸಂಭವಿಸಬಾರದೆಂಬ ಆಸೆಯಿಂದ ಅವಳು ಅದನ್ನು ತನ್ನ ಮಗನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು. ಅದು ಯಾರ ಮೇಲೆ ಪ್ರಯೋಗವಾದಾಗಲೂ ಅವರನ್ನು ಅದು ಕೊಲ್ಲದೇ ಬಿಡುತ್ತಿರಲಿಲ್ಲ . ಈಗ ನನ್ನ ಅಸ್ತ್ರವು ನನ್ನ ಬಳಿಗೆ ಬಂದು ನನ್ನನ್ನು ಸೇರಿದೆ ಎಂದನು.”

ಪ್ರಶ್ನೆಗಳು :

43. ಅ) ವೈಷ್ಣವಾಸ್ತ್ರವು ಭಗದತ್ತನಿಗೆ ಹೇಗೆ ದೊರಕಿತು?

43. ಬ) ಕೃಷ್ಣನು ಅರ್ಜುನನನ್ನು ನಿನ್ನಂತಹ ಧನುರ್ಧಾರಿಯನ್ನು ನೋಡಿ ಹೆಮ್ಮೆ ಎನಿಸಿದೆ ಎನ್ನಲು ಕಾರಣವೇನು?

**XIV.** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ **1*5=5**

44. ನಿಮ್ಮನ್ನು ಕಲುಬುರ್ಗಿಯ ಸರ್ಕಾರಿ ಪ್ರೌಢ ಶಾಲೆಯ 'ಮೌನಶ್ರೀ' ಎಂದು ಭಾವಿಸಿಕೊಂಡು ಶಾಲಾ ಆವರಣದಲ್ಲಿ ಗಿಡಗಳನ್ನು ನೆಡಲು ಉಚಿತ ಸಸಿಗಳನ್ನು ನೀಡುವಂತೆ ಕೋರಿ, ವಲಯ ಅರಣ್ಯಾಧಿಕಾರಿಗಳವರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಕೊಡಗಿನ ಸರ್ಕಾರಿ ಪ್ರೌಢ ಶಾಲೆಯ 'ನಾಗೇಂದ್ರ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆಯುವ ಮಾತೆಯರ ಸಭೆಯಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿ, ಕೊಳ್ಳೇಗಾಲದಲ್ಲಿ ವಾಸವಿರುವ 'ಸರೋಜ' ಎಂಬ ಹೆಸರಿನ ತಾಯಿಗೆ ಪತ್ರ ಬರೆಯಿರಿ.

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ **1*5=5**

45. ಅಂತರ್ಜಲ ಮರುಪೂರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು

ಅಥವಾ

ಪ್ಲಾಷ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

## ಮಲ್ಲೇಶ್ವರಂ, ಬೆಂಗಳೂರು – 3

# 2019–20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ 1

ವಿಷಯ : ಪ್ರಥಮ ಭಾಷೆ ಕನ್ನಡ [ಖಾಸಗಿ ಅಭ್ಯರ್ಥಿಗಳಿಗಾಗಿ] ವಿಷಯ ಸಂಕೇತ : 01 K

ಸಮಯ : 3–15 ಗಂಟೆಗಳು ಗರಿಷ್ಠ ಅಂಕಗಳು : 125

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.10*1=10

1. ವ್ಯಾಪಾರಿಯಾದ ಅನಂತಮೂರ್ತಿಯವರು ತಮ್ಮ ಊರು ಸಿದ್ದನಪುರಕ್ಕೆ ನಡೆದೇ ಹೋದರು. ಈ ವಾಕ್ಯದಲ್ಲಿರುವ ಸರ್ವನಾಮ ಪದ :

ಎ) ವ್ಯಾಪಾರಿ ಬಿ) ಅನಂತಮೂರ್ತಿ

ಸಿ) ತಮ್ಮ ಡಿ) ಸಿದ್ದನಪುರ

2. ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

ಎ) ಅರ್ಧ ವಿರಾಮ ಬಿ) ಪ್ರಶ್ನಾರ್ಥಕ

ಸಿ) ಅಲ್ಪವಿರಾಮ ಡಿ) ಉದ್ಧರಣ

3. 'ಮೂಗಾವುದ' ಪದವು ಈ ಸಮಾಸದ್ದಾಗಿದೆ :

ಎ) ದ್ವಿಗು ಬಿ) ಗಮಕ

ಸಿ) ಕ್ರಿಯಾ ಡಿ) ಅಂಶಿ

4. ಶ್ಚುತ್ವಸಂಧಿಯ ಉದಾಹರಣೆಯಿದು :

ಎ) ಅಷ್ಟೈಶ್ವರ್ಯ ಬಿ) ಉನ್ಮಾದ

ಸಿ) ಬೃಹಚ್ಛತ್ರ ಡಿ) ಅತ್ಯವಸರ

5. ಹಳೆಗನ್ನಡದಲ್ಲಿ ಕರಣ ಕಾರಕದ ವಿಭಕ್ತಿ ಪ್ರತ್ಯಯ :

ಎ) ಇಂದಂ ಬಿ) ಅತ್ತಣಿಂದಂ

ಸಿ) ಅಂ ಡಿ) ಕೆ

6. ಅರಬ್ಬೀ ಭಾಷೆಯಿಂದ ಕನ್ನಡಕ್ಕೆ ಬಂದ ಪದವಿದು :

ಎ) ದಲ್ಲಾಳಿ ಬಿ) ಕಿಮ್ಮತ್ತು

ಸಿ) ಸಲಾಮು ಡಿ) ತಕರಾರು

7. ನಾಮಪದಗಳ ಗುಣವಾಚಕಗಳ ಗುಂಪಿಗೆ ಸೇರುವ ಪದವಿದು :

ಎ) ಒಳ್ಳೆಯ ಬಿ) ನೋಟ

ಸಿ) ತೆಂಕಣ ಡಿ) ಮೂವರು

8. ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು ಹೀಗೆನ್ನುವರು :

ಎ) ಸಾಮಾನ್ಯಾವ್ಯಯ ಬಿ) ಕ್ರಿಯಾರ್ಥಕಾವ್ಯಯ

ಸಿ) ಅವಧಾರಣಾರ್ಥಕಾವ್ಯಯ ಡಿ) ಅನುಕರಣಾವ್ಯಯ

9. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಹೀಗೆನ್ನುವರು :

ಎ) ಸಾಮಾನ್ಯ ವಾಕ್ಯ ಬಿ) ಮಿಶ್ರವಾಕ್ಯ

ಸಿ) ನ್ಯೂನವಾಕ್ಯ ಡಿ) ಸಂಯೋಜಿತವಾಕ್ಯ

10. ಶಬ್ದಾಲಂಕಾರದ ವಿಧಗಳಲ್ಲಿ ಇದು ಒಂದು :

ಎ) ಚಿತ್ರಕವಿತ್ತ್ವ ಬಿ) ರೂಪಕ

ಸಿ) ಶ್ಲೇಷ ಡಿ) ಉತ್ಪ್ರೇಕ್ಷೆ

II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. 5*1=5

11. ಹಾಲ್ಜೇನು : ಜೋಡುನುಡಿ : : ಬೇಗಬೇಗನೆ :

12. ಪೆರ್ಮೆ : ತದ್ಧಿತಾಂತ ಭಾವನಾಮ : : ಮಾಡಲಿಕ್ಕೆ :

13. ಗಡಣ : ಸಮೂಹ : : ಗ್ಲಾನಿ :

14. ಅರ್ಕ : ಎಕ್ಕ : : ವಂಧ್ಯಾ :

15. ಕಂದಪದ್ಯ : ನಾಲ್ಕು ಪಾದಗಳು : : ಉತ್ಪಲಮಾಲಾವೃತ್ತ :

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8*1=8

16. ಸುಕುಮಾರಸ್ವಾಮಿಯ ತಂದೆಯ ಹೆಸರೇನು?

17. ದೇವನೂರು ಮಹಾದೇವ ಅವರು ಓದಿದ ಹಳಕಟ್ಟಿಯವರ ಪುಸ್ತಕದ ಹೆಸರೇನು?

18. ಮುಂಬೈ ಪ್ರಾಂತ್ಯದ ಸ್ಯಾನಿಟರಿ ಇಂಜಿನಿಯರ್ ಆಗಿ ನೇಮಕಗೊಂಡ ಪ್ರಥಮ ಭಾರತೀಯ ಯಾರು?

19. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

20. ಶಿವರುದ್ರಪ್ಪ ಅವರು ನದೀಜಲಗಳು ಏನಾಗಿವೆ ಎಂದಿದ್ದಾರೆ?

21. ಪರಶುರಾಮನು ದ್ರೋಣನಿಗೆ ಯಾವ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟನು?

22. ಪುಟ್ಟಿ ಬಾಲರವಿಯನ್ನು ಕಂಡು ಹೇಗೆ ಮತ್ತೆ ಮತ್ತೆ ನೋಡುತ್ತಿದ್ದಾಳೆ?

23. ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಎಂದು ಪುಟ್ಟಿ ಹೇಗೆ ಪ್ರಶ್ನಿಸುತ್ತಾಳೆ?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **15*2=30**

24. ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸು ಹೇಗೆ ಇದೆ ತಿಳಿಸಿ.

25. 'ಸ್ಟೋನ್ ಆಫ್ ಸ್ಕೋನ್' ಇದರ ವಿಶೇಷತೆಯನ್ನು ತಿಳಿಸಿ.

26. ಅರಸನು ಯಶೋಭದ್ರೆಯ ಮನೆಗೆ ಆಗಮಿಸಲು ಕಾರಣವಾದ ಆಶ್ಚರ್ಯಕರ ವಿಷಯ ಯಾವುದು?

27. ಗ್ರಾಮ ದೇವತೆ ಮನೆಮಂಚಮ್ಮ ಮತ್ತು ಜನರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

28. ಹಲಗಲಿಗೆ ದಂಡು ಬರಲು ಕಾರಣವೇನು?

29. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

30. ವಿವೇಕಾನಂದರು ಇಂದಿಗೂ ಸತ್ಯ ಎನ್ನಲು ಕಾರಣವಾದ ಅವರ ವೈಯಕ್ತಿಕ ಮತ್ತು ವೈಚಾರಿಕ ಸತ್ಯ ಯಾವುದು?

31. ರಕ್ತ ಸಿಕ್ತ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದ ಭಗತ್ ಸಿಂಗ್‌ಗೆ ಅದರಿಂದ ದೊರೆತ ಫಲವೇನು?

32. ಮೃಗವು ರಾಜಕುಮಾರನಾಗಿ ಬದಲಾದ ಸಂದರ್ಭದ ಘಟನೆಯನ್ನು ತಿಳಿಸಿ.

33. ಉಪ್ಪಿನ ವಿಶೇಷತೆಯು ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

34. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?

35. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?

36. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ಎಂದು ಕವಿ ಜಿ.ಎಸ್. ಶಿವರುದ್ರಪ್ಪ ಹೇಳಿದ್ದಾರೆ?

37. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾವುವು?

38. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನನು ಹೇಳಿದುದೇಕೆ?

**V.** ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ **4*3=12**

39. ಎ.ಎನ್. ಮೂರ್ತಿರಾವ್

40. ಜಿ.ಎಸ್. ಶಿವರುದ್ರಪ್ಪ

41. ಸಾ.ರಾ. ಅಬೂಬಕ್ಕರ್

42. ದ. ರಾ. ಬೇಂದ್ರೆ

**VI.** ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

43. ಗಗನವಬುಧಿಗೆ ಸರಿ ಸರೋವರ

ಜಗಕೆ ಹಿತವನು ಶಕ್ರ ಮನುಜಾ

ದಿಗಳ ಮಾತಾರೂಪು ಗೋವುಗಳಿದು ನಿಧಾನ ಮತ ॥

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.1*3=3

44. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಎರಡನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 2*3=6

45. ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ

ಅಥವಾ

ಬೆಳ್ಳಗಿರುವುದೆಲ್ಲ ಹಾಲಲ್ಲ ; ಹೊಳೆಯುವುದೆಲ್ಲ ಚಿನ್ನವಲ್ಲ

46. ದೇಶ ಸುತ್ತಿ ನೋಡು; ಕೋಶ ಓದಿ ತಿಳಿ

ಅಥವಾ

ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತೆ

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ 6*3=18

47. "ನಾನಾಕೆಯನ್ನು ಪರೀಕ್ಷಿಸುವೆ ನೀವು ಬಿಸಿ ನೀರು ಸಿದ್ಧಪಡಿಸಿ"

48. "ಸಾಮಾಜಿಕ ಕಾನೂನುಗಳ ಹರಿಕಾರ"

49. " ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ "

50. " ಮಂಗಳಲೋಕದ ಅಂಗಳಕೇರಿ "

51. " ಬೇರೆ ಬಣ್ಣವನೆ ಕಾಣೆ "

52. " ಎನ್ನ ಚಟ್ಟರಿಂ ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ "

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ 1*4=4

53. ನೆಲಕಿರಿವೆನೆಂದು ________

____________________

________________

________________ ಪುದುವಾಳ್ದಪನೇ ॥

ಅಥವಾ

ಪುಟ್ಟಿದ ನೂರ್ವರು__________

______________________________

____________________

_____________________ ಛಲವನೆ ಮೆರೆವೆಂ ॥

**XI.** ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ **1*4=4**

54. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

ನೂರ್ವನೇ ವೀರನಾತನ ಯಜ್ಞತುರಗಮಿದು

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥

ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ

ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ

ಗುರ್ವತೋಳ್ಗಳಿವೇತಕೆಂದು ಸಲೆ ವಾಜಿಯಂ ತೊಟ್ಟು ಲವನುರಿದೆದ್ದನು ॥

**XII.** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ **2*4=8**

55. ಶಬರಿಯು ರಾಮ ಲಕ್ಷ್ಮಣರಿಗೆ ಮಾಡಿದ ಉಪಚಾರ ಮತ್ತು ತನ್ನ ಅಂತಸ್ಸುಖವನ್ನು ತೋರಿಸಿದ ರೀತಿಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

ಅಥವಾ

ಮತಂಗಾಶ್ರಮದ ಬಳಿ ರಾಮಲ್ಷ್ಮಣರು ಸೀತೆಯನ್ನು ನೆನೆದು ದುಃಖಿಸಿದ ಪರಿ ಮತ್ತು ಪರಸ್ಪರ ಮಾಡಿಕೊಂಡ ಸಮಾಧಾನದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

56. ಶ್ರೀಕೃಷ್ಣನು ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸಿ ಒಡ್ಡಿದ ಆಮಿಷಗಳೇನು?

ಅಥವಾ

ಪಾಂಡವರು ಸಹೋದರರೆಂದು ತಿಳಿಸಿ ಆಮಿಷ ಒಡ್ಡಿದ ಶ್ರೀಕೃಷ್ಣನಿಗೆ ಕರ್ಣನ ಪ್ರತ್ಯುತ್ತರ ಏನೆಂಬುದನ್ನು ವಿವರಿಸಿ.

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **1*4=4[2+2]**

57. ಯಾವುದೇ ಒಂದು ಪ್ರದೇಶದ ಅಭಿವೃದ್ಧಿಗೆ ರೂಪಿಸುವ ಕಾರ್ಯಕ್ರಮ ಹೇಗಿರಬೇಕು ಎಂಬ ವಿಷಯವನ್ನು 'ಚಿಪ್ಕೋ ಚಳವಳಿ' ಜನರಿಗೆ, ಸರ್ಕಾರಕ್ಕೆ ಬಹು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತಿದೆ. ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು; ಪರಿಸರಕ್ಕೆ ಪೂರಕವಾಗಿರಬೇಕು. ವಿನಾಶವಿಲ್ಲದ ಅಭಿವೃದ್ಧಿಯೇ ನಮ್ಮ ಗುರಿಯಾಗಬೇಕು – ಇದು ಚಿಪ್ಕೋ ಚಳವಳಿಯ ಮೂಲಮಂತ್ರ. ಅರಣ್ಯಗಳು ಮರಮಟ್ಟುಗಳನ್ನೂ, ರಾಳವನ್ನೂ ಒದಗಿಸುವ ಬೃಹತ್ ಆಗರ – ಇದು ಸರ್ಕಾರದ ವಾಣಿಜ್ಯ

ದೃಷ್ಟಿ. ಅರಣ್ಯಗಳು ನೆಲದ ಸಾರವನ್ನು ರಕ್ಷಿಸುವ, ನೀರನ್ನು ಹಿಡಿದಿಡುವ, ಪರಿಸರವನ್ನು ಶುಚಿಯಾಗಿಡುವ ಬೃಹತ್ ನೈಸರ್ಗಿಕ ವ್ಯವಸ್ಥೆ ಕೂಡ. ಇದು ಜನಸಾಮಾನ್ಯರ ದೃಷ್ಟಿ. ಈ ಎರಡೂ ದೃಷ್ಟಿಗಳ ಅರ್ಥಪೂರ್ಣ ಸಮ್ಮಿಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ. ಸಮಸ್ತ ರೀತಿಯ ಆಧುನಿಕ ಉಪಕರಣಗಳಿಂದ ಸಜ್ಜಾದ ವೃತ್ತ ಪತ್ರಿಕೆಗಳು, ಸಿನಿಮಾ, ರೇಡಿಯೋ, ದೂರದರ್ಶನ ಮುಂತಾದ ಮಾಧ್ಯಮಗಳು ಸಾಧಿಸಲಾರದ ಕೆಲಸವನ್ನು ಚಿಪ್ಕೋ ಸದಸ್ಯರು ಬೆಟ್ಟಗಾಡು ಪ್ರದೇಶಗಳಲ್ಲಿ ಕಾಲ್ನಡಿಗೆಯಲ್ಲಿ ನಡೆದು ಸಾಧಿಸಿದ್ದಾರೆ. ಚಿಪ್ಕೋ ತಂಡ ಹಳ್ಳಿಯ ಜನರಿಗೆ ಮೂಲಭೂತವಾಗಿ ಎರಡು ಕಾರ್ಯಕ್ರಮಗಳನ್ನು ರೂಪಿಸಿದೆ. ಮೊದಲನೆಯದು: ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು. ಎರಡನೆಯದು: ಆಹಾರ ಮೇವು ಸೌದೆ ಗೊಬ್ಬರ ಮತ್ತು ನಾರು ಈ ಐದು ಆವಶ್ಯಕತೆಗಳನ್ನು ಪೂರೈಸುವಂತಹ ಮರಗಳನ್ನು ನೆಡುವುದು. ಈ ಎರಡೂ ಕಾರ್ಯಗಳು ಇಂದು ಹಿಮಾಲಯ ಪರ್ವತ ಪ್ರದೇಶದ ನೂರಾರು ಹಳ್ಳಿಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ. ಚಿಪ್ಕೋ ಚಳವಳಿಯ ಅಸಾಧಾರಣ ಯಶಸ್ಸಿನ ಗುಟ್ಟೇಂದರೆ ಅದು ಜನರಿಂದ, ಜನರ ಒಳಿತಿಗಾಗಿ ಹುಟ್ಟಿ ಬೆಳೆದ ಆಂದೋಲನ. ವೈಯಕ್ತಿಕ ಮಟ್ಟದಲ್ಲಿ ಪರಿಸರ ಪ್ರಜ್ಞೆ ಬೆಳೆದಾಗ ಮಾತ್ರ ನಮ್ಮನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳಿಂದ ನಮಗೆ ಮುಕ್ತಿ ಸಾಧ್ಯ.

ಪ್ರಶ್ನೆಗಳು :

57. ಅ) ಯಾವ ಎರಡು ದೃಷ್ಟಿಕೋನಗಳ ಸಮ್ಮಿಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ?

57.ಬ) ಹಿಮಾಲಯ ಪರ್ವತ ಪ್ರದೇಶದ ಹಳ್ಳಿಗಳಲ್ಲಿ ಚಿಪ್ಕೋ ಚಳವಳಿ ಜನಪ್ರಿಯಗೊಳಿಸಿದ ಎರಡು ಕಾರ್ಯಕ್ರಮಗಳು ಯಾವುವು?

**XIV.** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5

58. ನಿಮ್ಮನ್ನು ಹುಬ್ಬಳ್ಳಿಯ ಸರ್ಕಾರಿ ಪ್ರೌಢಶಾಲೆಯ 'ತೇಜಸ್ವಿ' ಎಂದು ಭಾವಿಸಿಕೊಂಡು ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ವ್ಯವಸ್ಥಾಪಕರಿಗೆ ಪ್ರದರ್ಶನದ ವೇಳೆಯನ್ನು ತಿಳಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಕಾರ್ಕಳದ ಅಬ್ಬಕ್ಕದೇವಿ ವಸತಿಶಾಲೆಯ 'ಸಮನ್ವಿತ' ಎಂದು ಭಾವಿಸಿಕೊಂಡು ಬೆಳಗಾವಿಯ ಕೋಟೆ ಬೀದಿಯ ನಿವಾಸಿ ಶಾಂತಾಬಾಯಿ ಎಂಬ ಹೆಸರಿನ ತಾಯಿಗೆ ಕ್ಷೇಮ ಸಮಾಚಾರ ತಿಳಿಸಿ ಪತ್ರ ಬರೆಯಿರಿ.

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ 1*5=5

59. ಪ್ರೌಢ ಶಾಲಾ ಶಿಕ್ಷಣದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ದೊರಕುವ ಅವಕಾಶಗಳು

ಅಥವಾ

ನನ್ನ ಮೆಚ್ಚಿನ ಪುಸ್ತಕ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

## ಮಲ್ಲೇಶ್ವರಂ, ಬೆಂಗಳೂರು – 3

# 2019–20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ 2

ವಿಷಯ : ಪ್ರಥಮ ಭಾಷೆ ಕನ್ನಡ [ಖಾಸಗಿ ಅಭ್ಯರ್ಥಿಗಳಿಗಾಗಿ] ವಿಷಯ ಸಂಕೇತ : **01 K**

ಸಮಯ : 3–15 ಗಂಟೆಗಳು ಗರಿಷ್ಠ ಅಂಕಗಳು : 125

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.10*1=10

1. 'ಅತ್ಯಾದರ' ಪದವು ಈ ಸಂಧಿಯದ್ದಾಗಿದೆ :

ಎ) ಯಣ್ ಸಂಧಿ ಬಿ) ಅನುನಾಸಿಕ ಸಂಧಿ

ಸಿ) ಜಶ್ತ್ವ ಸಂಧಿ ಡಿ) ಶ್ಚುತ್ವ ಸಂಧಿ

2. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆಯನ್ನು ಬಳಸುವರು

ಎ) ಅಲ್ಪವಿರಾಮ ಬಿ) ಆವರಣ

ಸಿ) ವಿವರಣ ಡಿ) ಅರ್ಧವಿರಾಮ

3.' ಕೈ ಕೊಳ್ಳುದು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ಕರ್ಮಧಾರಯ ಬಿ) ಅಂಶಿ

ಸಿ) ಕ್ರಿಯಾ ಡಿ) ತತ್ಪುರುಷ

4. ಅಪಾದಾನ ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ :

ಎ) ಚತುರ್ಥಿ ಬಿ) ಪಂಚಮಿ

ಸಿ) ತೃತೀಯಾ ಡಿ) ಸಪ್ತಮಿ

5. ವ್ಯಾಪಾರಿಯು ನಷ್ಟ ಅನುಭವಿಸಿ ನಗರದಿಂದ ಹಳ್ಳಿಗೆ ವಲಸೆ ಹೋದನು. ಈ ವಾಕ್ಯದಲ್ಲಿರುವ ಅನ್ವರ್ಥನಾಮಪದ :

ಎ) ವ್ಯಾಪಾರಿ ಬಿ) ಹಳ್ಳಿ

ಸಿ) ಅನುಭವ ಡಿ) ನಗರ

6. 'ಹೌದು, ಅಲ್ಲ' ಪದಗಳು ಈ ಅವ್ಯಯಕ್ಕೆ ಉದಾಹರಣೆ ಆಗಿವೆ :

ಎ) ಅವಧಾರಣಾರ್ಥಕಾವ್ಯಯ ಬಿ) ಕ್ರಿಯಾರ್ಥಕಾವ್ಯಯ

ಸಿ) ಸಾಮಾನ್ಯಾರ್ಥಕಾವ್ಯಯ ಡಿ) ಭಾವಸೂಚಕಾವ್ಯಯ

7. ದ್ವಿರುಕ್ತಿಗೆ ಸೂಕ್ತ ಉದಾಹರಣೆಯಿದು :

ಎ) ಸತಿಪತಿ ಬಿ) ಬೇಡಬೇಡ

ಸಿ) ಹಾಲ್ಜೇನು ಡಿ) ಮಕ್ಕಳುಮರಿ

8. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂತಃ ವಾಕ್ಯವು :

ಎ) ಸಾಮಾನ್ಯವಾಕ್ಯ ಬಿ) ಮಿಶ್ರವಾಕ್ಯ

ಸಿ) ಅಪೂರ್ಣವಾಕ್ಯ ಡಿ) ಸಂಯೋಜಿತವಾಕ್ಯ

9. "ಅವರು ತನ್ನ ಚೀಲದಿಂದ ಕನ್ನಡಕವನ್ನು ತೆಗೆದು ಮಹೇಶನಿಗೆ ಕೊಟ್ಟರು." ಈ ವಾಕ್ಯದಲ್ಲಿರುವ ಸರ್ವನಾಮ ಪದ :

ಎ) ಮಹೇಶ ಬಿ) ಕನ್ನಡಕ

ಸಿ) ಚೀಲ ಡಿ) ಅವರು

10. ಸಕರ್ಮಕ ಧಾತುವಿಗೆ ಸೂಕ್ತ ಉದಾಹರಣೆ ಇದಾಗಿದೆ.

ಎ) ಓಡು ಬಿ) ತಿದ್ದು

ಸಿ) ಹೋಗು ಡಿ) ನಾಚು

II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. 5*1=5

11. ದಲ್ಲಾಳಿ : ಪಾರ್ಸಿ : : ಕಾಗದ :

12. ವಿದ್ಯಾಧರ : ಬಿಜ್ಜೋದರ : : ಸಂಸ್ಕೃತ :

13. ಚಟ್ಟರಿಂ : ಶಿಷ್ಯರಿಂದ : : ಸಮಂತು :

14. ಹಿರಿಮೆ : ತದ್ಧಿತಾಂತ ಭಾವನಾಮ : : ನೆನಪು :

15. ಚಂಕಮಾಲಾವೃತ್ತ : ಅಕ್ಷರಗಣ : : ಕಂದ :

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8*1=8

16. ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ ವಿಶ್ವೇಶ್ವರಯ್ಯನವರು ಮಾಡಿದ ಘೋಷಣೆ ಏನು?

17. ಚಾವಣಿಯಿಲ್ಲದ ಗುಡಿಯಲ್ಲಿ ಪೂಜಿತಳಾಗಿರುವ ದೇವತೆಯ ಹೆಸರೇನು?

18. ಶಾನುಭೋಗರು ಚಿಕ್ಕನಾಯಕನ ಹಳ್ಳಿಯಿಂದ ಊರಿಗೆ ವಾಪಸ್ಸು ಹೋಗುವಾಗ ಯಾವ ಕಣಿವೆಯನ್ನು ದಾಟಿ ಹೋಗಬೇಕಿತ್ತು?

19. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ನ್ಯಾಯ ಕೇಳಲು ಯಾರ ಬಳಿಗೆ ಬಂದರು?

20. ದ್ರುಪದನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು?

21. ದ್ರೋಣನಿಗೆ ಯಾವುದು ಧನವಾಗಿತ್ತು?

22. ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆದು ಉಳುವವನಕಂಡು ನಗುವುದು ಯಾವುದು?

23. ನೀರಲ್ಲೆ ಹುಟ್ಟಿ ನೀರಲ್ಲೆ ಬೆಳೆದು ನೀರು ತಾಕಿದರೆ ಮಾಯವಾಗುವುದು ಏನು?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **15*2=30**

24. ಶಬರಿಯು ರಾಮ ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ತಿಳಿಸಿ.

25. ವೆಷ್ಟ್ ಮಿನಿಷ್ಟರ್ ಅಬೆ ಪ್ರಾರ್ಥನಾ ಮಂದಿರದ ವಿಶೇಷತೆಯನ್ನು ತಿಳಿಸಿ.

26. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕೆ " ಮಾದರಿ ಮೈಸೂರು" ಎಂಬ ಕೀರ್ತಿ ಪ್ರಾಪ್ತವಾಗಲು ಕಾರಣವೇನು?

27. ವಚನಕಾರರ ಪ್ರಜ್ಞೆಯ ಬಗ್ಗೆ ದೇವನೂರು ಮಹಾದೇವರ ಅಭಿಪ್ರಾಯವನ್ನು ತಿಳಿಸಿ.

28. ವೃಕ್ಷವು ಸಾಕ್ಷಿ ಹೇಳಿದಾಗ ಸತ್ಯವನ್ನು ಹೊರತರಲು ಧರ್ಮಬುದ್ಧಿಯು ಮಾಡಿದ ಉಪಾಯವನ್ನು ತಿಳಿಸಿ.

29. ವಟವೃಕ್ಷದ ಬಳಿ ಹೊನ್ನನ್ನು ಹೂಳಿಡುವ ಸಂದರ್ಭದ ಘಟನೆಯನ್ನು ತಿಳಿಸಿ.

30. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

31. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?

32. ಪಾರ್ಥ ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?

33. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

34. ದ್ರವ್ಯಾರ್ಥಿಯಾಗಿ ಬಂದ ದ್ರೋಣನನ್ನು ಪರಷುರಾಮನು ಹೇಗೆ ಸತ್ಕರಿಸಿದನು?

35. ಮನುಷ್ಯತ್ತ್ವದ ಮಹಿಮೆಯನ್ನು ಕುರಿತು ವಿವೇಕಾನಂದರ ಅಭಿಪ್ರಾಯವನ್ನು ತಿಳಿಸಿ.

36. ಒಡೆಯನ ಮನೆಯ ಅಂಗಳದ ಪ್ರಕೃತಿ ಸೌಂದರ್ಯ ಪುಟ್ಟ ಪೋರಿಗೆ ಹೇಗೆ ಕಂಡುಬಂದಿತು?

37. ಭಗತ್ ಸಿಂಗನು ವೀರಯೋಧನಾಗಿ ಅಮರನಾದುದು ಹೇಗೆ ತಿಳಿಸಿ.

38. ವರ್ತಕನು ನಗರದಲ್ಲಿ ವಾಸಿಸುವುದು ಕಷ್ಟವೆಂದು ಹಳ್ಳಿಗೆ ಹೋಗಲು ಕಾರಣವೇನು?

**V.** ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **4*3=12**

39. ವಿ.ಕೃ. ಗೋಕಾಕ್

40. ದೇವನೂರು ಮಹಾದೇವ

41. ಕುಮಾರವ್ಯಾಸ

42. ಪಂಪ

**VI.** ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

43. ಪುಟ್ಟಿದ ನೂರ್ವರುಮೆನ್ನೊಡ

ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ ॥

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.1*3=3

44. ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು

ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಎರಡನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 2*3=6

45. ಕೂಡಿಬಾಳಿದರೆ ಸ್ವರ್ಗ ಸುಖ

ಅಥವಾ

ಅಡಿಕೆಗೆ ಹೋದ ಮಾನ ಆನೆಕೊಟ್ಟರೂ ಸಿಗದು

46. ಮಾಡಿದ್ದುಣ್ಣೋ ಮಹರಾಯ

ಅಥವಾ

ತಾಳಿದವನು ಬಾಳಿಯಾನು

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ 6*3=18

47. "ಸೂರ್ಯನೇ ತೇಜಗೆಡೆ ತೇಜಕೆಡೆಯಾರು"

48. "ಹುಲಿ ಈಗ ಎಷ್ಟು ಹಸಿದಿರಬೇಕು"

49. "ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಳ್ಗುಮದಂ ನೋಡಿ"

50. "ಹೊಸ ಎಚ್ಚರದೊಳು ಬದುಕೋಣ "

51. "ಮತ್ತೆ ವರುಣನ ಲೋಕದಿಂ ಬಂದು ಮುಳಿದಪನು"

52. "ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ "

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ 1*4=4

53. ನೀಲ ಮೇಘ ________________

________________________

________________________

________________ ಮಾಡಿದೆ ಕಣ್ಣಾ

ಅಥವಾ

ಯುಗಯುಗಗಳ ____________________

____________________

____________________

____________________ ಹಸುಮಕ್ಕಳ ಹರಸಿ

**XI.** ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ **1*4=4**

54. ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ

ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ

ಹಲಗರ ಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ

ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗ ರಾಮ ಮಸಲತ್ತ

ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ

ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ

ಹೊಡಿರಿ ಜಗಳ ಕೂಡಿ ತೀರ್ತವು ಕುಮಕಿ ನಮ್ಮದ್ಯಾವತ್ತ

**XII.** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ **2*4=8**

55. ಮುದುಕಿಯು ರಾಹಿಲನನ್ನು ವೈರಿಸೈನಿಕರಿಂದ ರಕ್ಷಣೆ ಮಾಡಿದ ಸಂದರ್ಭವನ್ನು ವಿವರಿಸಿ.

ಅಥವಾ

ರಾಹಿಲನು ಮುದುಕಿಯ ಸೊಸೆಯನ್ನು ಪ್ರಾಣಾಪಾಯದಿಂದ ಹೇಗೆ ಪಾರುಮಾಡಿದನು ವಿವರಿಸಿ.

56. ಕವಿ ಕುವೆಂಪುರವರು ಹಸುರಿನ ವ್ಯಾಪಕತೆಯನ್ನು ಎಲ್ಲೆಲ್ಲಿ ಕಂಡಿದ್ದಾರೆ ವಿವರಿಸಿ.

ಅಥವಾ

ಹಸುರು ಪದ್ಯವು ಕವಿ ಕುವೆಂಪುರವರ ಪ್ರಕೃತಿ ತನ್ಮಯತೆಗೆ ಸಾಕ್ಷಿಯಾಗಿದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **1*4=4[2+2]**

57. ಪ್ರಾಗ್ಜೋತಿಷನಾದ ಭಗದತ್ತನು ಸುಪ್ರತೀಕವೆಂಬ ಆನೆಯೊಂದಿಗೆ ಭೀಮನನ್ನು ಎದುರುಗೊಂಡನು. ಈ ಆನೆಯನ್ನು ಮಣಿಸಲು ಭೀಮನಿಂದಲೂ ಸಾಧ್ಯವಿಲ್ಲ. ಇದನ್ನು ಮಣಿಸುವುದು ಕೃಷ್ಣಾರ್ಜುನರಿಗೆ ಮಾತ್ರ ಗೊತ್ತು. ಇಂದ್ರನ ಸಖನಾದ ಭಗದತ್ತನು ಪುರುಷಶ್ರೇಷ್ಠನೆಂದೂ ಪ್ರಸಿದ್ಧನು. ಇಂದು ಆತನನ್ನು ಸೋಲಿಸಲೇ ಬೇಕೆಂದು ಪಣತೊಟ್ಟು ಕೃಷ್ಣಾರ್ಜುನರು ಮುಂದೆ ಹೋಗುವಷ್ಟರಲ್ಲಿ ತ್ರಿಗರ್ತರು ಅರ್ಜುನನನ್ನು ಎದುರುಗೊಂಡು ಕಾದಾಡಲು ಪ್ರಾರಂಭಿಸಿದರು. ಸುಶರ್ಮನು ಅವನ ಸಹೋದರರು ಅರ್ಜುನನ ಮೇಲೆರಗಿ ಬಂದರು. ಅರ್ಜುನನು ಇನ್ನಿಲ್ಲದಂತೆ ಹೋರಾಡಿ ಅವರನ್ನು ಸೋಲಿಸಿ ಅವರ ಸೈನ್ಯವನ್ನು

ದಿಕ್ಪಾಪಾಲಾಗಿ ಚದುರಿಸಿದನು. ಕೃಷ್ಣನ ಆಜ್ಞೆಯಂತೆ ಅರ್ಜುನನು ತಂದೆಯನ್ನು ಸ್ಮರಿಸಿ, ವಜ್ರಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಸುಶರ್ಮನು ರಥದಲ್ಲಿಯೇ ಮೂರ್ಛಿತನಾದನು ಇದನ್ನು ಕಂಡ ಕೃಷ್ಣನು "ಅರ್ಜುನ, ಇಂದು ಬಹಳ ಚೆನ್ನಾಗಿ ಕಾದಾಡಿದೆ ತ್ರಿಗರ್ತರನ್ನು ಏಕಾಂಗಿಯಾಗಿ ಸೋಲಿಸಿದೆ. ಭಗದತ್ತ ಮತ್ತು ಅವನ ಆನೆಯನ್ನು ಮಣಿಸಿದೆ. ನಿನ್ನಂತಹ ಧನುರ್ಧಾರಿಯನ್ನು ನೋಡಿ ನನಗೆ ಹೆಮ್ಮೆ ಎನಿಸಿದೆ ಎಂದನು." ಯುದ್ಧದ ಸಂದರ್ಭದಲ್ಲಿ ಭಗದತ್ತನು ಪ್ರಯೋಗಿಸಿದ ವೈಷ್ಣವಾಸ್ತ್ರವು ಭಗದತ್ತನಿಗೆ ದೊರಕಿದ ಸಂದರ್ಭವನ್ನು ಕೃಷ್ಣನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಹೀಗೆ ತಿಳಿಸುತ್ತಾನೆ. " ಒಂದು ಸಲ ಯಾವುದೋ ಕೆಟ್ಟ ಗಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆನು. ಯಾವ ಆಯುಧದಿಂದಲೂ ತನ್ನ ಮಗನಿಗೆ ಸಾವು ಸಂಭವಿಸಬಾರದೆಂಬ ಆಸೆಯಿಂದ ಅವಳು ಅದನ್ನು ತನ್ನ ಮಗನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು. ಅದು ಯಾರ ಮೇಲೆ ಪ್ರಯೋಗವಾದಾಗಲೂ ಅವರನ್ನು ಅದು ಕೊಲ್ಲದೇ ಬಿಡುತ್ತಿರಲಿಲ್ಲ . ಈಗ ನನ್ನ ಅಸ್ತ್ರವು ನನ್ನ ಬಳಿಗೆ ಬಂದು ನನ್ನನ್ನು ಸೇರಿದೆ ಎಂದನು."

ಪ್ರಶ್ನೆಗಳು :

57. ಅ) ವೈಷ್ಣವಾಸ್ತ್ರವು ಭಗದತ್ತನಿಗೆ ಹೇಗೆ ದೊರಕಿತು?

57. ಬ) ಕೃಷ್ಣನು ಅರ್ಜುನನನ್ನು ನಿನ್ನಂತಹ ಧನುರ್ಧಾರಿಯನ್ನು ನೋಡಿ ಹೆಮ್ಮೆ ಎನಿಸಿದೆ ಎನ್ನಲು ಕಾರಣವೇನು?

**XIV.** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.

**1*5=5**

58. ನಿಮ್ಮನ್ನು ಕಲಬುರ್ಗಿಯ ಸರ್ಕಾರಿ ಪ್ರೌಢ ಶಾಲೆಯ 'ಮೌನಶ್ರೀ' ಎಂದು ಭಾವಿಸಿಕೊಂಡು ಶಾಲಾ ಆವರಣದಲ್ಲಿ ಗಿಡಗಳನ್ನು ನೆಡಲು ಉಚಿತ ಸಸಿಗಳನ್ನು ನೀಡುವಂತೆ ಕೋರಿ, ವಲಯ ಅರಣ್ಯಾಧಿಕಾರಿಗಳವರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಕೊಡಗಿನ ಸರ್ಕಾರಿ ಪ್ರೌಢ ಶಾಲೆಯ 'ನಾಗೇಂದ್ರ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆಯುವ ಮಾತೆಯರ ಸಭೆಯಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿ, ಕೊಳ್ಳೇಗಾಲದಲ್ಲಿ ವಾಸವಿರುವ 'ಸರೋಜ' ಎಂಬ ಹೆಸರಿನ ತಾಯಿಗೆ ಪತ್ರ ಬರೆಯಿರಿ.

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ **1*5=5**

59. ಅಂತರ್ಜಲ ಮರುಪೂರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು

ಅಥವಾ

ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು